ಹುಡುಗರೆಲ್ಲ ಹಿಂದ ಹಾಡೋರು. ನನಗ ಕಲಿಬೇಕಂಬ ಅಪೇಕ್ಷೆ ಭಾಳ. ಹಂಗಾಗಿ ಅವರು ಎಲ್ಲಿಗೆ ಹೋದ್ರೆ ಅಲ್ಲಿಗೆ ಅವರ ಹಿಂದ ಹೋಗಿ ಹಂಗೇ ಕಲ್ತುಕಂಡುಬುಟ್ಟೆ.

ಇನ್ನ ನಮ್ಮನ್ನಾಗುನೂ ಬೆಳಗ ಮುಂಜಾಲೆ ಐದಕ್ಕ ಎದ್ದೇಳೋರು. ದಿನಾ ಇಲ್ಲಂದ್ರೂ ಒಂದಿವಸ ತಪ್ಪಿ ಒಂದಿವಸನ್ನ ನುಚ್ಚು ಹೊಡೆಯೋರು. ಮುತ್ತಿನಂಥ ಬಿಳಿಜ್ವಾಳ ಬೀಸಕಲ್ಲಿನ ಬಾಯಿಗೆ ಹಾಕ್ಕೆಂತ ತಿರುವಿಕೆಂತ ನುಚ್ಚು ಒಡೆಯೋ ಕಾಲಕ್ಕ ಬೀಸೋಪದಗಳನ್ನು ಹಾಡೋರು. ಅವಾಗೇನ್ರೀ ಎಪ್ಪಾ... ಟೀವಿಲ್ಲ, ರೇಡುವಿಲ್ಲ. ಕಾಲಿಗೊಂದು ಕೈಗೊಂದು ಪದ ಕೇಳಿಕೆಂತ ಬೆಳದವ್ರು ನಾವು.

ಮುಂದ ಹಿಂಗ ಈ ಪದಗಳಿಗಿ ಇಂಥ ಕಾಲ ಬರುತ್ತ ಅಂತ ಅವಾಗ ನನಗ ಗೊತ್ತಿರಲಿಲ್ಲರೀ ಎಪ್ಪಾ... ಸುಳ್ಯಾಕ ಹೇಳಂದಿ.

◆ **ಸಾಲಿ ಏನನ್ನ ಓದಿಕೆಂಡಿದ್ದೇನಮ್ಮ?**

ಆಗಿನ ಕಾಲಕ್ಕ ಹತ್ತನೇತನಕ ಓದಿಕಂಡೀನ್ರೀ ನಾನು. ಮದಿವ್ಯಾಯ್ತು, ಅಲ್ಲಿಗೇ ಸರಿಮಾಡಿಕೆಂಡೆ.

◆ **ಆವಾಗ್ಗ ಈವಾಗ್ಗ ಸಾಲಿ ಕಲುಸದ್ರಾಗ ಏನನ್ನ ವ್ಯತ್ಯಾಸ ಅನುಸ್ತಾದಮ್ಮ ಅಥವಾ ಅವಾಗಿದ್ದಂಗೇ ಇವಾಗೂ ಐತೆ ಅನ್ಸುತ್ತಾ?**

ಆವಾಗಿಂದು ಗಟ್ಟಿ ಸಾಲಿರೀ. ಇವಾಗಿನ ಸಾಲಿ ಅವಾಗಿನಷ್ಟು ಗಟ್ಟಿ ಅಂತ ನನಗೇನು ಅನಸಂಗಿಲ್ರೀ.

◆ **ಸಾಲಿ ಕಲಿವಾಗ ಮಾಸ್ತರಾಗ್ಲೀ, ಜತೆಗಾರರಾಗ್ಲೀ, ಊರಾಗಿನೋರಾಗ್ಲೀ ಯಾರನ್ನ ಜಾತಿಭೇದ ಮಾಡಿದ್ದು ಏನಾದರೂ ಇತ್ತೇನಮ್ಮ?**

ನಮಗ ಯಾರೂ ಜಾತಿಭೇದ ಮಾಡಿದ್ದು ನೆನಪು ಗೂಡ ಇಲ್ಲರೀ. ನಮಗ ಅವಾಗ ಈರಮ್ಮ ಟೀಚರ್ ಹೆಡ್ಮಾಸ್ತರ್ ಆಗಿದ್ರು. ವಡಿಕೆ ಮಾಸ್ತರು, ಶರಣಪ್ಪ ಗುಡದಿನ್ನಿ ಮಾಸ್ತ್ರು, ಸಿದ್ರಾಮಪ್ಪ ಮಾಸ್ತ್ರು, ಧ್ರುವರಾಜ ಮಾಸ್ತ್ರು, ಶಾಂತಮಲ್ಲಯ್ಯ ಮಾಸ್ತ್ರು ನಮಗ ಕಲುಸ್ತಿದ್ರು. ಈ ಟೀಚರೆಲ್ಲ ನನ್ನ ಮನಸಿನ್ಯಾಗ ಇವತ್ತಿಗೂ ಆರ್ರೀ. ಸಾಲ್ಯಾಗ ಕಿತ್ತೂರ ಚೆನ್ನಮ್ಮನ ನಾಟಕ ಮಾಡಿಸಿದಾಗ ನನ್ನಿಂದನೇ ಕಿತ್ತೂರ ಚೆನ್ನಮ್ಮನ ಪಾರ್ಟು ಮಾಡಿಸಿದ್ದುರ್ರೀ. ಇನ್ನೊಂದು ಏನಂದ್ರೆ ಆವಾಗ ನಮಗ ಕೆ. ರಾಘವೇಂದ್ರರಾವ್, ಬಿ. ರಾಘವೇಂದ್ರರಾವ್ ಅಂತ ಇಬ್ರು ಮಾಸ್ತ್ರು ಇದ್ದುರ್ರೀ. ಅವ್ರು ಬ್ರಾಂಬ್ರು. ಅವ್ರು ನಮ್ಮನ್ನೆಲ್ಲ ಮನೀಗೇ ಕರಕಂಡು ಹೋಗಿ ಊಟ ಮಾಡ್ಸತಿದ್ರು. ಇದಕ್ಕಿಂತ ಇನ್ನೇನು ಹೇಳ್ಲಿರಿ.

◆ **ಮದಿವ್ಯಾಗಿ ಗಂಡನ ಮನೀಗಿ ಬಂದ ಮ್ಯಾಲೆ ಅತ್ತೆ, ಮಾವ, ಗಂಡ ಇವರ್‍ಯಾರೂ ಹಾಡಾಕ ಬ್ಯಾಡ ಅನ್ಲಿಲ್ಲೇನಮ್ಮ? ತವರಮನೀಗಿ ಹೋಲಿಸಿದ್ರೆ ಅಲ್ಲಿ ಎಂಗಿತ್ತು ವಾತಾವರಣ?**

ಎಂಗಿತ್ತಂಬಕ ಏನೈತ್ರೀ ಎಪ್ಪಾ... ಇದೇ ತವರಮನಿ, ಇದೇ ಗಂಡನ ಮನಿ. ನಮ್ಮೆಜಮಾನ ನಮ್ಮಮ್ಮನ ತಮ್ಮ, ಸೋದರಮಾವಗೇ ಕೊಟ್ಟಾರ ನನ್ನ. ಹಿಂಗಾಗಿ ಮೊದಲಿಂದ ಹೊಕ್ಕುಬಳಕಿ ಇದ್ದ ಮನೆ. ಮದಿವ್ಯಾಗಿ ಬ್ಯಾರೆ ಮನೀಗೆ ಹೋದಂಗೇನ್ ನನಗ ಅನಸಲಿಲ್ಲ. ನಾನು ಪದ ಹಾಡದು ನಮ್ಮವ್ವಗ (ನಮ್ಮಮ್ಮನ ಅಮ್ಮಗ) ಗೊತ್ತಿತ್ತು. ನಮ್ಮ ಸೋದರ ಮಾವಗುನೂ ಗೊತ್ತಿತ್ತು. ಮದಿವ್ಯಾದ ಮ್ಯಾಲೆ ನಮ್ಮವ್ವನೇ ನನಗ ಅತ್ತೆ ಆದ್ಳು. ಹಂಗಾಗಿ ಏನೂ ವ್ಯತ್ಯಾಸ ಅಂತ ಅನಸ ಪ್ರಸಂಗನೇ ಬರ್ಲಿಲ್ರೀ ನನಗ.

ಅದಲ್ದ ಮನ್ಯಾಗ ನಂದು ಸ್ವಯಂ ರಾಜಿಕಿರೀ. ಮದುವ್ಯಾದ ಮ್ಯಾಲೆನೂ ಭಜನಿ ಮಾಡವ್ರಲ್ಲಿ